25th July 2008

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (12) 112
ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು : (ಶ್ರೀ ಸಂಗಮೇಶ್ವರ ಬಿ.ಕೆ.
ಉತ್ತರಿಸುವ ಸಚಿವರು : ಶ್ರೀ ಹೆಚ್. ಹಾಲಪ್ಪ
ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಭದ್ರಾವತಿ ಕ್ಷೇತ್ರದಲ್ಲಿ ಅನೇಕ ಜನರು ಆರ್ಥಿಕವಾಗಿ ತುಂಬಾ ಹಿಂದುಳಿದಿದ್ದರೂ ಸಹ ಬಿ.ಪಿ.ಎಲ್. ಕಾರ್ಡು ಅಂತ್ಯೋದಯ ಕಾರ್ಡುಗಳಿಗೆ ಇನ್ನು ಸರಿಯಾಗಿ ವಿತರಣೆ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ.
ಆ)	ಕ್ಷೇತ್ರದಲ್ಲಿ ಬಿ.ಐ.ಎಸ್.ಎಲ್. ಮತ್ತು ಎಂ.ಪಿ.ಎಂ. ಕಾರ್ಖಾನೆಗಳಲ್ಲಿ ದಿನಗೂಲಿ ನೌಕರರುಗಳಾಗಿ ಸಾವಿರಾರು ಜನರು ಕೆಲಸ ಮಾಡುತ್ತಿದ್ದು ಹಾಗೂ ಪಿ.ಎಫ್. ಲೇಬರ್‌ಗಳ ಸಹ ಕೆಲಸ ಮಾಡುತ್ತಿದ್ದು ಸದರಿ ನೌಕರರುಗಳ ಕುಟುಂಬ ವರ್ಗದವರಿಗೆ ಬಿ.ಪಿ.ಎಲ್. ಕಾರ್ಡು ಅಂತ್ಯೋದಯ ಕಾರ್ಡುಗಳು ಇಲ್ಲಿಯವರೆಗೂ ಸರಿಯಾಗಿ ದೊರೆಯುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ.
ಇ)	ಸದರಿ ಕ್ಷೇತ್ರದ ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ ಸಮರ್ಪಕವಾಗಿ ಆಹಾರ ಪದಾರ್ಥಗಳು ಹಾಗೂ ಸೀಮೆಎಣ್ಣೆಯನ್ನು ಗ್ರಾಹಕರುಗಳಿಗೆ ವಿತರಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ.
ಈ)	ಈ ಕೇತ್ರದ ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ ಅಕ್ಕಿ, ಸಕ್ಕರೆ, ಗೋಧಿ ವಿತರಿಸದಿದ್ದಲ್ಲಿ ಕೂಡಲೇ ಅಂತಹ ನ್ಯಾಯಬೆಲೆ ಅಂಗಡಿಗಳ ಪರವಾನಿಗೆಯನ್ನು ರದ್ದುಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ (ವಿವರ ನೀಡುವುದು)?	ಲೋಪದೋಷಗಳು ಕಂಡು ಬಂದ ನ್ಯಾಯಬೆಲೆ ಅಂಗಡಿ/ ಚಿಲ್ಲರೆ ಸೀಮೆಎಣ್ಣೆ ಪರವಾನಿಗೆ ದಾರರ ವಿರುದ್ಧ ಕರ್ನಾಟಕ ಅಗತ್ಯ ವಸ್ತುಗಳ ಕಾಯ್ದೆ 1955 ಹಾಗೂ ಕರ್ನಾಟಕ ಅಗತ್ಯ ವಸ್ತುಗಳ (ಸಾವಿಪ) ನಿಯಂತ್ರಣ ಆದೇಶ 1992 ರಡಿ ಕ್ರಮ ಕೈಗೊಳ್ಳಲಾಗುವುದು.